ಓ.ಎಸ್. 130/2017
ಪಿ.ಡಬ್ಲ್ಯೂ-3

ದಿನಾಂಕಃ **17.10.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ.ಆರ್.ಎಂ. ವಕೀಲರಿಂದಃ</u>

ದಾವಾ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಸರ್ವೆ ನಂ.31. ದಾವಾ ಸರ್ವೆ ನಂ.31 ಮೂಲತಃ ನಾಗಪ್ಪನವರಿಗೆ ಸೇರಿದ ಸ್ವತ್ತು. ಸದರಿ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿ ಇದ್ದಿದ್ದರಿಂದ ನಾಗಪ್ಪನವರಿಗೆ ಸೇರಿರುತ್ತದೆ ಎಂದು ನುಡಿಯುತ್ತಿದ್ದೇನೆ, ಅದರೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಸ್ವತ್ತು ನಮ್ಮ ಜಮೀನಿನ ಯಾವ ದಿಕ್ಕಿನಲ್ಲಿರುತ್ತದೆ ಎಂದು ಹೇಳಲು ಆಗುವುದಿಲ್ಲ. ನನ್ನ ಜಮೀನಿನ ಸರ್ವೆ ನಂ. 34. ನನಗೆ 3 ಎಕರೆ ಜಮೀನು ಇರುತ್ತದೆ. ದಾವಾ ಸ್ವತ್ತು ದಿಣ್ಣೆ ಜಮೀನಾಗಿರುತ್ತದೆ. 1 ನೇ ವಾದಿಯ ತಂದೆಯ ಹೆಸರು ಬಸಣ್ಣ. ದಾವಾ ಸ್ವತ್ತನ್ನು 1 ನೇ ವಾದಿಯ ತಾತ ಖರೀದಿ ಮಾಡಿರುತ್ತಾರೆ. 1 ನೇ ವಾದಿಯ ತಾತ ಸರ್ವೆ ನಂ. 31 ರಲ್ಲಿ 11 ಎಕರೆ ಖರೀದಿ ಮಾಡಿರುತ್ತಾರೆ.

**2.** ವಾದಿ ಈ ದಾವೆಯನ್ನು ದೊಡ್ಡರಂಗಪ್ಪನವರ ವಿರುದ್ಧ ಹೂಡಿರುತ್ತಾರೆ. 1 ನೇ ವಾದಿಯ ತಂದೆ 1 ಎಕರೆ 10 ಗುಂಟೆ ಜಮೀನನ್ನು ಸರ್ವೆ ನಂ.31/1 ರಲ್ಲಿ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗೆ ಮಾರಾಟ ಮಾಡಿದ ನಂತರ 1 ನೇ ವಾದಿಯ ತಾಯಿ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ಪ್ರಕರಣ ಪ್ರತಿವಾದಿಯ ಪರವಾಗಿ ತೀರ್ಪು ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ 1 ಎಕರೆ 10 ಗುಂಟೆಯಲ್ಲಿ ಪ್ರತಿವಾದಿಯೇ ಸಾಗುವಳಿ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

**3.** ಈ ದಾವಾ ಸ್ವತ್ತಿನ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ 1 ನೇ ವಾದಿ ನಾನು ಹೇಳಿದಂತೆ ಸಾಕ್ಷ್ಯ ನುಡಿಯಲು ಹೇಳಿದ ಕಾರಣ ಬಂದು ಸಾಕ್ಷಿ ನುಡಿಯುತ್ತಿರುತ್ತೇನೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ